**O.S.No. 46/2026**
**PW1**

ದಿನಾಂಕ 12.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಸಹಾಯಕ ಸರ್ಕಾರಿ ವಕೀಲರಿಂದಃ</u>

ನಾನು 2011 ರಲ್ಲಿ ವಿವಾಹವಾಗಿರುತ್ತೇನೆ. ನನ್ನ ವಿವಾಹ ಆಮಂತ್ರಣ ಪತ್ರಿಕೆ ಈಗ ನನ್ನ ಬಳಿ ಇಲ್ಲ. ನನ್ನ ವಿವಾಹ ಆಮಂತ್ರಣ ಪತ್ರಿಕೆಯಲ್ಲಿ ನನ್ನ ಗಂಡನ ಹೆಸರು ಶೇಷಪ್ಪ ಗೌಡ ಎಂದು ನಮೂದು ಇದೆ. ನನ್ನ ವಿವಾಹದ ಸಂದರ್ಭದಲ್ಲಿ ನನ್ನ ಗಂಡನ ಹೆಸರನ್ನು ಅಶೋಕ್ ಗೌಡ ಎಂದು ಸಹ ಕರೆಯುತ್ತಿದ್ದರು. ನನ್ನ ಮಗನ ಹೆಸರು ಅಶ್ವಿಕ್ ಗೌಡ. ನನ್ನ ಮಗನ ಜನನ ಪ್ರಮಾಣ ಪತ್ರದಲ್ಲಿ ನನ್ನ ಗಂಡನ ಹೆಸರು ಶೇಷಪ್ಪ ಗೌಡ ಎಂದು ನಮೂದು ಇದೆ. ಸದರಿ ಜನನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ನನ್ನ ಗಂಡನ ಹೆಸರು ಶೇಷಪ್ಪ ಗೌಡ ಯಾನೆ ಅಶೋಕ್ ಗೌಡ ಎಂದು ನಮೂದು ಇಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ನಾನು ಕೊಟ್ಟ ಮಾಹಿತಿ ಪ್ರಕಾರ ಅವರ ಮರಣ ಪ್ರಮಾಣ ಪತ್ರದಲ್ಲಿ ಹೆಸರು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ನನ್ನ ಗಂಡನ ಹೆಸರನ್ನು ಶೇಷಪ್ಪ ಗೌಡ ಅಲಿಯಾಸ್ ಅಶೋಕ್ ಗೌಡ ಎಂದು ಕೊಟ್ಟಿದ್ದೆ, ಆದರೆ ಅವರು ತಪ್ಪಾಗಿ ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದುರುದ್ದೇಶದಿಂದ ನನ್ನ ಗಂಡನ ಹೆಸರನ್ನು ಶೇಷಪ್ಪ ಗೌಡ ಯಾನೆ ಅಶೋಕ್ ಗೌಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ನಾನು ನನ್ನ ಗಂಡನ ಹೆಸರನ್ನು ಶೇಷಪ್ಪ ಗೌಡ ಯಾನೆ ಅಶೋಕ್ ಗೌಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೋರಿರುವಂತಹ ಯಾವುದೇ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ